**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 24/2015**

**ದೋ.ಸಾ. : 19 ಪ್ರಾ.ಸಾ. : 21**

ಸಾಕ್ಷಿಯ ಹೆಸರು : ಅಭೀದ್ ಮೊಹಿದಿನ್ ಶೇಖ್

ತಂದೆಯ ಹೆಸರು : ಮೊಹಿದಿನ್ ಶೇಖ್

ವಯಸ್ಸು : 52 ವರ್ಷ

ಉದ್ಯೋಗ : ಚಪಾತಿ ತಯಾರಿಸುವವನು, ಅಬುದಾಬಿ.

ವಾಸ : ಹೊನ್ನಾವರ.

**ದಿನಾಂಕಃ 23-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನನ್ನ ಮೂಲ ಮನೆ ಹೊನ್ನಾವರದಲ್ಲಿ ಇದೆ. ಮೃತೆ ಶಬರೀನ್ ನನ್ನ ಹೆಂಡತಿ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಹಿರಿಯ ಅಣ್ಣ ಅಲ್ತಾಫ್ ನ ಹೆಂಡತಿ. ನಾವು 4 ಜನ ಅಣ್ಣ ತಮ್ಮಂದಿರು. ಒಬ್ಬ ಅಕ್ಕ ಇದ್ದಾಳೆ. ನಾವು 4 ಜನ ಸಹೋದರರು ಹೊರದೇಶದಲ್ಲಿ ಕೆಲಸ ಮಾಡುತ್ತೇವೆ. ನನ್ನ ಹೆಂಡತಿ, ಆರೋಪಿ ಮತ್ತು ನನ್ನ ಇನ್ನೊಬ್ಬ ಸಹೋದರ ಫಿರೋಜ್ ಶೇಖ್ ನ ಹೆಂಡತಿ ದೋಸಾ-11 ಹೊನ್ನಾವರದಲ್ಲಿ ನನ್ನ ತಾಯಿ ದೋಸಾ-8 ರವರ ಜೊತೆ ವಾಸ ಇದ್ದರು. ನಾನು ದುಬೈನಿಂದ ವರ್ಷಕ್ಕೆ ಒಂದು ಬಾರಿ ಹೊನ್ನಾವರದಲ್ಲಿ ನನ್ನ ಮೂಲ ಮನೆಗೆ ಬಂದು ಹೋಗುತ್ತಿದ್ದೆ. ಹೊನ್ನಾವರದಲ್ಲಿ ಇರುವ ನಮ್ಮ ಮನೆ ನನ್ನ ಸಹೋದರ ಖಲೀಲ್ ಹೆಸರಿನಲ್ಲಿ ಇದೆ. ಆ ಹೊಸ ಮನೆಯನ್ನು ಕಟ್ಟಿಸುವಾಗ ನಾನು ಹೊನ್ನಾವರದಲ್ಲಿಯೇ ಇದ್ದೆ. ನನ್ನ ಉಳಿದ ಮೂರು ಜನ ಸಹೋದರರು ಆಗ ಹೊರದೇಶದಲ್ಲಿ ಇದ್ದರು. ಆ ಮನೆ ನಿರ್ಮಿಸಲು ನಾನು ಸಹ ಹಣ ಹೂಡಿರುತ್ತೇನೆ. ಹೊನ್ನಾವರದ ಆ ಮನೆಯಲ್ಲಿ ಆರೋಪಿ, ನನ್ನ ಹೆಂಡತಿ ಹಾಗೂ ದೋಸಾ-11 ವಾಸ ಇರಲು ಬೇರೆ ಬೇರೆ ಕೊಠಡಿಗಳು ಅವರಿಗೆ ಇದ್ದವು ಆದರೆ ಅಡುಗೆ ಕೋಣೆ ಒಂದೇ ಇತ್ತು. ನನ್ನ ಮತ್ತು ನನ್ನ ಹೆಂಡತಿಯ ಕೊಠಡಿ ಮೊದಲನೆ ಮಹಡಿಯಲ್ಲಿ ಇತ್ತು. ಹೊಸ ಮನೆ ನಿರ್ಮಾಣ ಆದ ನಂತರ ನಾನು ನನ್ನ ಕೆಲಸಕ್ಕೆ ವಾಪಸ್ಸು ಹೊರದೇಶಕ್ಕೆ ಹೋದೆ. ನನ್ನ ಅತ್ತಿಗೆ ಆರೋಪಿ ಮತ್ತು ನನ್ನ ಹೆಂಡತಿ ಶಬರೀನ್ ನಡುವೆ ಸಣ್ಣ ವೈಮನಸ್ಸು ಇತ್ತು ಆದರೆ ಅವರು ಪುನಃ ಪುನಃ ಒಟ್ಟಿಗೆ ಸೇರುತ್ತಿದ್ದರು. ಆರೋಪಿ ಜೊತೆ ಸಣ್ಣ

ಪುಟ್ಟ ವೈಮನಸ್ಸು ಉಂಟಗುತ್ತಿದ್ದ ಬಗ್ಗೆ ನನ್ನ ಹೆಂಡತಿ ನನಗೆ ಹೇಳುತ್ತಿದ್ದಳು. ನಾನು ದುಬೈಗೆ ನೌಕರಿಗೆ ವಾಪಸ್ಸು ಹೋದ ಮೇಲೆ ಎರಡು ತಿಂಗಳ ನಂತರ ನನ್ನ ಹೆಂಡತಿಗೆ ಸಣ್ಣ ಪುಟ್ಟ ಸುಟ್ಟ ಗಾಯ ಆಗಿದೆ ಮನೆಗೆ ಬರಬೇಕು ಎಂದು ನನ್ನ ನೌಕರಿ ಮಾಡುತ್ತಿದ್ದ ಮುಖ್ಯ ಕಚೇರಿಯಿಂದ ನನಗೆ ಮಾಹಿತಿ ಬಂತು. ಆ ರೀತಿ ಮಾಹಿತಿ ಬಂದ ಮೇಲೆ ನಾನು ಗೋವಾಗೆ ಬಂದು ನಂತರ ಹುಬ್ಬಳ್ಳಿಯಲ್ಲಿ ನನ್ನ ಹೆಂಡತಿ ದಾಖಲಾಗಿದ್ದ ಕೆ ಎಮ್ ಸಿ ಆಸ್ಪತ್ರೆಗೆ ನೇರವಾಗಿ ಹೋದೆ. ಅದು ಸುಮಾರು 9 ವರ್ಷ ಆಗಿದೆ ನನಗೆ ಇಸವಿ ದಿನಾಂಕ ಹೇಳಲು ಆಗುವುದಿಲ್ಲ. ನಾನು ಹುಬ್ಬಳ್ಳಿ ಕೆ ಎಮ್ ಸಿ ಆಸ್ಪತ್ರೆಗೆಗೆ ಹೋದಾಗ ನನ್ನ ಹೆಂಡತಿ ಇನ್ನೂ ಜೀವಂತ ಇದ್ದಳು. ಆಕೆ ಆಗ ತೊದಲು ಮಾತನಾಡುತ್ತಿದ್ದಳು. ಆಕೆಯ ಮುಖಕ್ಕೆ ತಲೆಗೆ ಬೆನ್ನಿನ ಮೇಲೆ, ಮುಖದ ಮೇಲೆ ಸುಟ್ಟ ಗಾಯಗಳು ಆಗಿದ್ದವು. ನಾನು ಆಕೆಯನ್ನು ಹೇಗೆ ಸುಟ್ಟ ಗಾಯ ಆಯಿತು ಎಂದು ವಿಚಾರಿಸಿದೆನಾ ಎಂದರೆ ಆಕೆ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಆದ್ದರಿಂದ ಆಕೆಗೆ ಹೇಗೆ ಸುಟ್ಟ ಗಾಯಗಳು ಆದವು ಎಂದು ನನಗೆ ಮಾಹಿತಿ ಇಲ್ಲ. ನಾನು ಬಂದ 21 ದಿನದ ನಂತರ ಅದೇ ಸುಟ್ಟಗಾಯಗಳ ಕಾರಣ ನನ್ನ ಹೆಂಡತಿ ಕೆ ಎಮ್ ಸಿ ಆಸ್ಪತ್ರೆಯಲ್ಲಿ ಮೃತಪಟ್ಟಳು. ನಾನು ಈ ಬಗ್ಗೆ ಪೊಲೀಸನವರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ</u>**

2. ನಾನು ಕೆ ಎಮ್ ಸಿ ಆಸ್ಪತ್ರೆಗೆ ಬಂದು ನನ್ನ ಹೆಂಡತಿಯನ್ನು ನೋಡಿದಾಗ ಆಕೆ ಸರಿಯಾಗಿಯೇ ಮಾತನಾಡುತ್ತಿದ್ದಳು ಎಂದರೆ ಸರಿಯಲ್ಲ. ಆಕೆಗೆ ತುಟಿ ಎಲ್ಲಾ ಸುಟ್ಟು ತುಟಿ ದಪ್ಪ ಆಗಿತ್ತು. ನಾನು ನನ್ನ ಹೆಂಡತಿಯನ್ನು ವಿಚಾರಿಸಿದಾಗ ದಿನಾಂಕ 11.02.2015 ರಂದು ಬೆಳಿಗ್ಗೆ ಮಕ್ಕಳ ವಿಚಾರದಲ್ಲಿ ತನಗೆ ಮತ್ತು ಆರೋಪಿಗೆ ಜಗಳವಾಗಿತ್ತು ಆಗ ತನ್ನ ಅತ್ತೆ ದೋಸಾ-8 ಹಾಗೂ 11 ಮತ್ತು ದೋಸಾ-10 ಸೇರಿ ಜಗಳ ಬಿಡಿಸಿದ್ದರು ಮತ್ತು ನಂತರ ತಾನು ದೋಸಾ-9 ರವರೊಂದಿಗೆ ಸ್ವ ಸಹಾಯ ಸಂಘಕ್ಕೆ ಹೋಗಿ ಸಾಯಂಕಾಲ ಸುಮಾರು 7.15 ಗಂಟೆಗೆ ಮಕ್ಕಳು ಮತ್ತು ದೋಸಾ-9 ರವರೊಂದಿಗೆ ಮರಳಿ ಮನೆಗೆ ಬಂದೆ ಮತ್ತು ನಂತರ ಸುಮಾರು ಸಂಜೆ 7.30 ಗಂಟೆಗೆ ತಾನು ತನ್ನ ಕೊಠಡಿಯಲ್ಲಿ ಮಕ್ಕಳೊಂದಿಗೆ ಇದ್ದಾಗ ಆರೋಪಿ ಅಲ್ಲಿಗೆ

ಬಂದು ತನಗೆ ಅವಾಚ್ಯ ಶಬ್ದಗಳಿಂದ ಬೈದು ಈದಿನ ನಿನಗೆ ಬಿಡುವುದಿಲ್ಲ ಎಂದು ಹೇಳಿ ಆರೋಪಿ ತಂದಿದ್ದ ಬಾಟಲಿಯಿಂದ ಸೀಮೆ ಎಣ್ಣೆಯನ್ನು ತನ್ನ ಮೇಲೆ ಸುರಿದು ಬೆಂಕಿ ಹಚ್ಚಿ ತನಗೆ ಕೊಲೆ ಮಾಡಲು ಪ್ರಯತ್ನಿಸಿದಳು ಮತ್ತು ತಾನು ತನ್ನ ಮಕ್ಕಳು ಕೂಡಿಕೊಂಡಾಗ ಆರೋಪಿ ಬಾಗಿಲು ಹಾಕಿಕೊಂಡು ಹೋದಳು ಎಂದು ನನ್ನ ಮುಂದೆ ಹೇಳಿದ್ದಾಳೆ ಎಂದರೆ ಸರಿಯಲ್ಲ. ಆರೋಪಿ ನನ್ನ ಹೆಂಡತಿಗೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದ್ದರಿಂದಲೇ ನನ್ನ ಹೆಂಡತಿ ಮೃತಪಟ್ಟಳು ಎಂದರೆ ಆ ರೀತಿ ನನ್ನ ಹೆಂಡತಿ ನನಗೆ ಹೇಳಿರುವುದಿಲ್ಲ. ನಾನು ಈ ಬಗ್ಗೆ ನಿಪಿ–29 ರಂತೆ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಪುನಃ ಮದುವೆಯಾಗಿದ್ದೇನೆ ಎಂದರೆ ಹೌದು. ನನ್ನ ಮೃತ ಹೆಂಡತಿ ಶಬರೀನಾಳಿಂದ ಹುಟ್ಟಿದ್ದ ಮಕ್ಕಳು ಈಗ ನನ್ನ ಜೊತೆ ಇದ್ದಾರೆ ಎಂದರೆ ಹೌದು. ಅವರು ಹೊನ್ನಾವರದಲ್ಲಿ ನಾನು ಹೇಳಿದ ಮೂಲ ಮನೆಯಲ್ಲಿ ಈಗ ಇದ್ದಾರೆ ಎಂದರೆ ಹೌದು. ಆರೋಪಿ ಈಗಲೂ ಅದೇ ಮನೆಯಲ್ಲಿ ಇದ್ದಾಳೆ ಎಂದರೆ ಸರಿಯಲ್ಲ. ಈಗ ಆರೋಪಿ ಬೇರೆ ಕಡೆ ವಾಸ ಇದ್ದಾಳೆ. ಆರೋಪಿ ನನ್ನ ಅಣ್ಣನ ಜೊತೆಯೇ ಈಗಲೂ ಪ್ರಕರಣ ಆದ ನಂತರವೂ ವಾಸ ಇದ್ದಾಳೆ. ನನ್ನ ಅಣ್ಣ ಮತ್ತು ಅತ್ತಿಗೆಯಾದ ಆರೋಪಿಗೆ ಯಾವುದೇ ತೊಂದರೆ ಆಗಬಾರದೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ**

ಏನೂ ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ